# ಹೊಸತು




## ಕ್ರಿಯೇಟಿವ್ ಸೌಂಡ್‌ಬ್ಲಾಸ್ಟರ್

ಕ್ರಿಯೇಟಿವ್ ಕಂಪೆನಿ ಹೊಸ ಪೋರ್ಟಬಲ್ ಸೌಂಡ್ ಕಾರ್ಡ್ ಒಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದರ ಜತೆಗೆ ಹೆಡ್‌ಫೋನ್ ಹಾಗೂ ಆ್ಯಂಪ್ಲಿಫೈರ್ ಕೂಡ ಸೇರಿದೆ.

ಈ ಸೌಂಡ್ ಬ್ಲಾಸ್ಟರ್ ಎಕ್ಸ್ ಜಿ 5 ಅತ್ಯಾಧುನಿಕ ತಂತ್ರಜ್ಞಾನದಿಂದ ಕೂಡಿದ್ದು ಗೇಮಿಂಗ್ ಸೌಲಭ್ಯ ಹೊಂದಿದೆ. ಆಡಿಯೊ ವ್ಯವಸ್ಥೆ ಬಹಳ ಚೆನ್ನಾಗಿದೆ ಎಂಬುದು ಕಂಪೆನಿ ವಿವರಣೆ. ಯುಎಸ್‌ಬಿ ಮೂಲಕ ಸಂಪರ್ಕ ಪಡೆದುಕೊಳ್ಳುವ ಸೌಲಭ್ಯವೂ ಇದೆ.

ವಿವರಕ್ಕೆ www.geekeygadgets.com



## ಕರಾಟ್‌ಲೇನ್ ಆಭರಣ

ಆಧುನಿಕ ವಿನ್ಯಾಸಗಳ ಆಭರಣಗಳ ಸಂಗ್ರಹಕ್ಕೆ ಹೆಸರಾದ ಕರಾಟ್‌ಲೇನ್ ಇದೀಗ ಜೇನುಹುಳಗಳು ನೈಸರ್ಗಿಕವಾಗಿ ನಿರ್ಮಿಸುವಂತಹ ಸುಂದರ ಗೂಡನ್ನು ಪ್ರೇರಣೆಯಾಗಿಟ್ಟುಕೊಂಡು ಅದೇ ತರದ ವಿನ್ಯಾಸಗಳಿಂದ ಕೂಡಿದ ತರಾವರಿ ಆಭರಣಗಳನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಚಿನ್ನ, ವಜ್ರಗಳಿಂದ ಕೂಡಿದ ಆಭರಣಗಳ ಸಂಗ್ರಹವಿದೆ. ಬೆಲೆ 11 ಸಾವಿರದಿಂದ 3 ಲಕ್ಷ ರೂಪಾಯಿ. ಮಾಹಿತಿಗೆ: www.CaratLane.com

## ಪೂಮದಿಂದ ಇವೊಸ್ಪೀಡ್ ಬೂಟ್

ಪಾದರಕ್ಷೆಗಳಿಗೆ ಹೆಸರಾದ ಪೂಮ ಕಂಪೆನಿ ಅತ್ಯಂತ ಹಗುರವಾದ ಮತ್ತು ಧರಿಸಿಕೊಳ್ಳಲು ಆರಾಮದಾಯಕವಾದ ಇವೊಸ್ಪೀಡ್ ಬೂಟ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಬೇಸಿಗೆ ಕಾಲಕ್ಕೆ ಸೂಕ್ತವಾಗಿದ್ದು, ಕ್ರೀಡಾಪಟುಗಳಿಗೆಂದೇ ತಯಾರು ಮಾಡಲಾಗಿದೆ. ಅದರಲ್ಲೂ ಫುಟ್‌ಬಾಲ್ ಆಟಗಾರರು ಧಾರಾಳವಾಗಿ ಬಳಸಬಹುದು.

ಮಾಹಿತಿಗೆ: 9945 2805 07



## ಐರಿಸ್ ಹೋಂ ಸುಗಂಧದ್ರವ್ಯ

ರಿಪ್ಪಲ್ ಫ್ರಾಗ್ರನ್ಸ್ ಪ್ರೈವೇಟ್ ಲಿಮಿಟೆಡ್ ಕಂಪೆನಿ ಈಗ ಹೊಸ ಬಗೆಯ ಸುಗಂಧದ ಫ್ರಾಗ್ರನ್ಸ್ ಸಂಗ್ರಹವನ್ನು ಬಿಡುಗಡೆ ಮಾಡಿದೆ. ಹೊಸ ವರ್ಷಾರಂಭದ ಸಡಗರವನ್ನು ಗಮನದಲ್ಲಿಟ್ಟುಕೊಂಡು ಹೊರತಂದಿರುವ ಈ ಸುಗಂಧ ದ್ರವ್ಯದಲ್ಲಿ ಹಲವು ವೈವಿಧ್ಯಗಳಿವೆ. ಆಕರ್ಷಕ ಗ್ಲಾಸ್ ಬಾಟಲ್‌ನಲ್ಲಿ ತಯಾರಾಗಿ ಬಂದಿದ್ದು, ಫ್ರೆಂಚ್ ಲ್ಯಾವೆಂಡರ್, ಟ್ಯೂಬ್ರೋಸ್, ಲೆಮನ್‌ಗ್ರಾಸ್ ಸುಗಂಧವನ್ನು ಒಳಗೊಂಡಿದೆ ಎಂಬುದು ಕಂಪೆನಿ ವಿವರಣೆ. ಬೆಲೆ 300 ರೂಪಾಯಿಗಳಿಂದ ಆರಂಭ.

ವಿವರಕ್ಕೆ: 9742279654 / 9742124240




## ಫೋನ್‌ಜಾಯ್ ಗೇಮ್‌ಪ್ಯಾಡ್

ಬ್ಲೂಟೂತ್ ನಿರ್ವಹಣೆಯಲ್ಲಿರುವ ಫೋನ್‌ಜಾಯ್ ಗೇಮ್‌ಪ್ಯಾಡ್‌ನ ಎರಡನೆ ಆವೃತ್ತಿ ಮಾರುಕಟ್ಟೆಗೆ ಹೊಸದಾಗಿ ಬಂದಿದೆ. ಇದು ಪೋರ್ಟಬಲ್ ಸಾಧನವಾಗಿದ್ದು, ವೀಡಿಯೊ ಗೇಮ್‌ಗಳನ್ನು ಎಲ್ಲಿ ಬೇಕೆಂದಲ್ಲಿ ಆಡಬಹುದು. ಇದರಲ್ಲಿರುವ ಶೋಲ್ಡರ್ ಬಟನ್, ಜಾಯ್‌ಸ್ಟಿಕ್, ಮತ್ತು ಆ್ಯಕ್ಷನ್ ಬಟನ್‌ಗಳು ಗೇಮ್‌ಗಳನ್ನು ಸುಲಭವಾಗಿ ಆಡಲು ಪ್ರೇರೇಪಿಸುವಂತಿವೆ. ಇದನ್ನು ಯಾವುದೇ ಸ್ಮಾರ್ಟ್‌ಫೋನ್ ಮತ್ತು ಟ್ಯಾಬ್ಲೆಟ್‌ಗಳಿಗೆ ಕೂಡ ಸುಲಭವಾಗಿ ಅಳವಡಿಸಿಕೊಳ್ಳುವಂತಿವೆ. ಮಾಹಿತಿಗೆ: www.geekeygadgets.com

